**E-ISSN:** 2583-9667
**Indexed Journal**
**Peer Reviewed Journal**
https://multiresearchjournal.theviews.in

**Received: 24-08-2024**
**Accepted: 30-09-2024**

**INTERNATIONAL JOURNAL OF ADVANCE RESEARCH IN MULTIDISCIPLINARY**

**Volume 2; Issue 4; 2024; Page No. 74-78**

# ಬಳ್ಳಾರಿ ಜಿಲ್ಲೆಯಲ್ಲಿ ಒಣಭೂಮಿ ಬೇಸಾಯಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು

**ಡಾ. ಬಸವರಾಜ ಯು**

ಸಂಶೋಧಕರು, ತಾಯಕನಹಳ್ಳಿ ಕೂಡ್ಲಿಗಿ (ತಾ) ವಿಜಯನಗರ, ಕರ್ನಾಟಕ, ಭಾರತ

**DOI:** https://doi.org/10.5281/zenodo.14343817

**Corresponding Author:** ಡಾ. ಬಸವರಾಜ ಯು

**Abstract**

**ಮಾನವ ಸಮಾಜದಲ್ಲಿ ಸಂಘ ಜೀವಿಯಾಗಿ ಜೀವನ ನೆಡಸುತ್ತಿದ್ದಾನೆ. ಸಾಮಾಜವನ್ನು ಬಿಟ್ಟು ಬದುಕಲಾರನು. ಈ ಸಮಾಜದಲ್ಲಿ ಗೌರವಯುತವಾಗಿ ಜೀವನ ಮಾಡಲು ಕೆಲವು ಅವಶ್ಯಕವಾದ ಅಂಶಗಳು ಮುಖ್ಯವಾಗುತ್ತವೆ. ಏಕೆಂದರೆ ಇವು ಜೀವನಕ್ಕೆ ಅವಶ್ಯಕವಾಗಿರುವಂತಹ ಸಂಪನ್ಮೂಲಗಳಾಗಿವೆ. ಎಲ್ಲಾ ಸಂಪನ್ಮೂಲಗಳನ್ನು ಒಬ್ಬ ವ್ಯಕ್ತಿಯಿಂದ ಉತ್ಪಾದಿಸಲು ಸಾಧ್ಯವಿಲ್ಲ. ಅದ್ದರಿಂದ ಇತರೆ ಸಮಾಜದಲ್ಲಿನ ವ್ಯಕ್ತಿಗಳು ಕೂಡಿ ಕೆಲಸಮಾಡಿದರೆ ಸಂಪನ್ಮೂಲಗಳನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ಅದೇ ರೀತಿಯಲ್ಲಿ ಮಾನವ ಅಭಿವೃದ್ಧಿಗೆ ಅವಶ್ಯಕವಾದ ಸುಸ್ಥಿರ ಅಭಿವೃದ್ಧಿ ಗುರಿಗಳಾದ ಬಡತನ ನಿರ್ಮೂಲನೆ, ಹಸಿವುಮುಕ್ತ, ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ, ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ, ಸ್ವಚ್ಛ ನೀರು, ನೈರ್ಮಲ್ಯ, ಅಗ್ಗವಾದ ಬದುಕು ಶುದ್ಧ ಗೌರವಯುತ ಕೆಲಸ ಮತ್ತು ನೆರವು, ಉದ್ಯಮ, ಆವಿಷ್ಕಾರ ಮತ್ತು ಮೂಲ ಸೌಕರ್ಯಗಳು, ಅಸಮಾನತೆ, ಸುಸ್ಥಿರ ನಗರಗಳು ಮತ್ತು ಸಮುದಾಯಗಳು, ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ, ಹವಾಮಾನದ ಬಗ್ಗೆ ಕ್ರಮ, ಜಲದ ಜೀವರಾಶಿ, ಭೂಮಿ ಮೇಲಿನ ಜೀವರಾಶಿ, ಶಾಂತಿ ನ್ಯಾಯ ಮತ್ತು ಸದೃಡ ಸಂಸ್ಥೆಗಳು, ಗುರಿ ಮುಟ್ಟಲು ಸಹಭಾಗಿತ್ವ, ಇವುಗಳು ಅವಶ್ಯಕವಾದ ಸುಸ್ಥಿರ ಅಭಿವೃದ್ಧಿ ಗುರಿಗಳು ಒಣಭೂಮಿ ಬೇಸಾಯಗಾರರಿಗೆ ದೊರೆತಿರುವುದನ್ನು ಅಧ್ಯಯನ ಮಾಡಲು ಸಾಮಾಜಿಕ, ಅರ್ಥಿಕ, ಸಮಾನತೆಯನ್ನು ಈ ಅಧ್ಯಾಯದಲ್ಲಿ ಒಳಪಡಿಸಿದ್ದು.**

**Keywords:** ಒಣಭೂಮಿ, ಕೃಷಿ, ಉದ್ಯೋಗ, ಧನಸಹಾಯ, ಜನಸಂಖ್ಯೆ, ಭೂ ಸುಧಾರಣೆ

### ಪೀಠಿಕೆ
ಮಾನವನ ಅಭಿವೃದ್ಧಿಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಪಡೆದ್ದಿದಾರೆ ಎಂದರೆ ವ್ಯಕ್ತಿಜೀವನ ನಿರ್ವಹಣೆ ಮಾಡಲು ಸಾಧ್ಯವಾಗಲು, ಸಾಮಾಜಿಕವಾಗಿ, ಅರ್ಥಿಕವಾಗಿ, ಅಭಿವೃದ್ದಿಯನ್ನು ಹೊಂದಬೇಕು. ಎಂದರೆ ಒಂದಷ್ಟು ಅಶ್ಯಕವಾದ ಅಂಶಗಳಾದ ಹಸಿವು ಮುಕ್ತ, ಉತ್ತಮ ಆರೋಗ್ಯ, ಗುಣಮಟ್ಟದ ಶಿಕ್ಷಣ, ಮತ್ತು ಲಿಂಗ ಸಮಾನತೆಯು ಅತಿಅವಶ್ಯಕವಾದ ಅಂಶಗಳಾಗಿವೆ ಇವುಗಳು ಅಭಿವೃದ್ಧಿಗೆ ಮೊದಲ ಮೆಟ್ಟಿಲುಗಳು ಎಂದರೆ ತಪ್ಪಾಗಲಾರದು. ಇಲ್ಲಿ ಉದ್ದೇಶಗಳಿಗೆ ಅನುಗುಣವಾಗಿ ಪ್ರಶ್ನಾವಳಿಗಳನ್ನು ರಚಿಸಿಕೊಂಡು ಹಿಡುವಳಿದಾರರನ್ನು ಸಮೀಕ್ಷೆ ಮಾಡಿದ್ದು ಅಲ್ಲಿ ಪಡೆದಿರುವಂತಹ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕ್ಷೇತ್ರಕಾರ್ಯ ಸಾಮಾನ್ಯ ಮಾಹಿತಿಯಲ್ಲಿ ಕುಟುಂಬದ ಸದಸ್ಯರು, ವಿವರ, ಜಾತಿ, ಧರ್ಮ ವೈವಾಹಿಕ ಸಂಬಂಧಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಲಾಗಿದೆ ಸಾಮಾಜಿಕ ಅಂಶಗಳಲ್ಲಿ ಶಿಕ್ಷಣ, ಅರೋಗ್ಯ, ಸಾಮಾಜಿಕ ಸ್ಥಿತಿ, ಅರ್ಥಿಕ ಅಂಶಗಳಲ್ಲಿ ಉದ್ಯೋಗ, ಅದಾಯ, ಭೂ ಹಿಡುವಳಿ ಇನ್ನೂ ಮುಂತಾದವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### ಸಾಮಾಜಿಕ ಮತ್ತು ಆರ್ಥಿಕ ಲಕ್ಷಣಗಳು
ಒಣಭೂಮಿ ಪ್ರದೇಶದಲ್ಲಿ ಕಂಡುಬರುವಂತಹ ಸಾಮಾನ್ಯ ಲಕ್ಷಣಗಳನ್ನು ಇಲ್ಲಿ ವಿವರಿಸಿದ್ದು ಆ ಪ್ರದೇಶದ ಜನಸಂಖ್ಯೆ ಪ್ರಮಾಣ, ಉದ್ಯೋಗ, ಭೂ ಸೂಧಾರಣೆ, ಧನಸಹಾಯ, ಅಸಮರ್ಪಕ ಭೂ ಬಳಕೆಯ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

### ಜನಸಂಖ್ಯೆ
ಒಂದು ಅಂದಾಜಿನ ಪ್ರಕಾರ ಶುಷ್ಕ ಅಥವಾ ಒಣಭೂಮಿ ಪ್ರದೇಶಗಳಲ್ಲಿ ಸತತವಾಗಿ ಹೆಚ್ಚುತ್ತಿರುವ ಜನಸಂಖ್ಯೆಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಒಂದು ಬಿಡಿಸಲಾರದ ಸಾಮಾಜಿಕ ಸಮಸ್ಯೆಯಾಗಿದೆ. ಸಂಪನ್ಮೂಲಗಳ ಕೊರತೆಯಿಂದ ಬಳಲುತ್ತಿರುವ ಇಂತಹ ಪ್ರದೇಶಗಳಲ್ಲಿ ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಕ್ರೋಡೀಕರಿಸಬೇಕಾಗಿದೆ. ಅದ್ದರಿಂದ ಒಣಭೂಮಿ ಬೇಸಾಯ ಅಥವಾ ಖುಷ್ಕಿ ಬೇಸಾಯದ ಅವಶ್ಯಕತೆ ಬಹಳ ಮಹತ್ವ ಪಡೆದಿದೆ. ಬಳಕೆಗೆ ಒಳಪಡುವಂತಹ ಭೂಮಿಯನ್ನು ಹೊರತುಪಡಿಸಿ ಇತರೆ ಭೂಮಿಯನ್ನು ಕೃಷಿಗೆ ಬಳಕೆ ಮಾಡಿಕೊಂಡು ವಿವಿಧ ರೀತಿಯ ಕೃಷಿ ಪದ್ಧತಿಯನ್ನು ಬಳಸಿ ಕೃಷಿ ಮಾಡಿದರೆ, ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗಾವಕಾಶಗಳ ದೊರೆಯುವುದಲ್ಲದೆ, ನೈಸರ್ಗಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದಾಗಿರುತ್ತದೆ.

### ಉದ್ಯೋಗ
ಹವಾಗುಣದ ವೈಪರಿತ್ಯದಿಂದಾಗಿ ಒಣಭೂಮಿ (ಖುಷ್ಕಿ) ಇಂತಹ ಪ್ರದೇಶಗಳಲ್ಲಿ ವರ್ಷದಲ್ಲಿ ಒಂದೇ ಬೆಳೆಯನ್ನು ಬೆಳೆಯಲು ಸಾಧ್ಯ. ಹೀಗಾಗಿ ಮಳೆಗಾಲದ ಅವಧಿಯನ್ನು ಬಿಟ್ಟರೆ ಜನರು ನಿರುದ್ಯೋಗಿಗಳಾಗಿರಬೇಕಾಗುತ್ತದೆ. ಆದ್ದರಿಂದ ವರ್ಷವಿಡಿ ಕೆಲಸ ಸಿಗುವ ವೃಕ್ಷಧಾರಿತ ಭೂ ಬಳಕೆ ಪದ್ಧತಿಯಾದಂತ ಖುಷ್ಕಿ ತೋಟಗಾರಿಕೆಯನ್ನು ಶಾಸ್ತ್ರೀಯವಾಗಿ ಅನುಸರಿಸಿದರೆ ಸಮಸ್ಯೆಯನ್ನು ಕಡಿಮೆ ಮಾಡಿಕೊಳ್ಳಬಹುದು.

**ಭೂ ಸುಧಾರಣೆಗಳು**

ಪ್ರಪಂಚದ ಹಲವಾರು ಶುಷ್ಕ ಪ್ರದೇಶಗಳಲ್ಲಿ ಭೂ ಸುಧಾರಣೆಗಳಿಂದ ಜನತೆಯ ಜೀವನ ಶೈಲಿಯಲ್ಲಿ ಬದಲಾವಣೆಯಾಗುತ್ತದೆ. ಆದರೆ ಭಾರತದ ಭೂ ಸುಧಾರಣೆ ಕಾಯ್ದೆಗಳನ್ನು ಸಮಾಜಿಕ ಹಿತದೃಷ್ಟಿಯಿಂದ ಪರಿಗಣಿಸದೆ ರಾಜಕೀಯ ತಂತ್ರಗಳನ್ನಾಗಿ ಬಳಸಲಾಗುತ್ತದೆ. ಹೀಗಾಗಿ ಭೂ ಅಭಿವೃದ್ದಿ ಕಾರ್ಯಕ್ರಮಗಳಂತಹ ಮಣ್ಣು ಮತ್ತು ನೀರು ಸಂರಕ್ಷಣೆ, ಮರ ಬೆಳೆಸುವುದು ಇತ್ಯಾದಿಗಳಿಗೆ ತೊಂದರೆಯುಂಟಾಗಿ ಅಭಿವೃದ್ದಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುತ್ತವೆ.

**ಧನ ಸಹಾಯ**: ಸಾಲ ಸೌಲಭ್ಯಗಳ ಕೊರತೆ ಬಹುತೇಕ ಖುಷ್ಕಿ ಪ್ರದೇಶಗಳಲ್ಲಿ ಅಭಿವೃದ್ದಿ ಕಾರ್ಯಕ್ರಮಗಳನ್ನು ಚುರುಕುಗೊಳಿಸಲು ಸಾಕಷ್ಟು ಆರ್ಥಿಕ ಸಂಪನ್ಮೂಲಗಳಿರುವುದಿಲ್ಲ. ಖುಷ್ಕಿ ಪ್ರದೇಶಗಳಲ್ಲಿ ತೋಟಗಳನ್ನು ಮಾಡಬೇಕಾದರೆ ಹೇರಳವಾಗಿ ಹಣ ಹೂಡ ಬೇಕಾಗುತ್ತದೆ. ಪ್ರಾರಂಭದಲ್ಲಿ ಹೇರಳವಾಗಿ ಹಣ ಹೂಡ ಬೇಕಾಗುತ್ತದೆ. ಅದ್ದರಿಂದ ರೈತರಿಗೆ ಸಾಲದ ಸೌಲಭ್ಯಗಳನ್ನು ಒದಗಿಸಕೊಡುವುದು ಅವಶ್ಯಕ. ಈ ದೆಸೆಯಲ್ಲಿ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನವರು ಒಣಭೂಮಿ ಕೃಷಿ ಪ್ರದೇಶದಲ್ಲಿ ಹಲವಾರು ಯೋಜನೆಗಳ ಮುಖಾಂತರ ರೈತರಿಗೆ ಸೌಲಭ್ಯಗಳನ್ನು ಮಂಜೂರು ಮಾಡುತ್ತಿದ್ದಾರೆ.

**ಬಳಕೆಗೆ ಯೋಗ್ಯವಲ್ಲದ ಭೂಮಿ:** ಒಣಭೂಮಿ ಬೇಸಾಯದ (ಖುಷ್ಕಿ) ಭೂಮಿಯಲ್ಲಿ ಪ್ರತಿ ವರ್ಷ ಒಂದು ಜಮೀನಿನಲ್ಲಿ ಕೇವಲ 120 ರಿಂದ 150 ದಿನಗಳಲ್ಲಿ ಒಂದು ಬೆಳೆಯನ್ನು ತೆಗದುಕೊಳ್ಳಲಾಗುತ್ತಿದೆ. ಈ ಕಾರಣದಿಂದ ಭೂ ಬಳಕೆಯ ಸಾಮಾರ್ಥ್ಯವು ಹೆಚ್ಚಿನ ಮಟ್ಟದಲ್ಲಿರುವುದಿಲ್ಲ. ಇದಕ್ಕಾಗಿ ಬಹುವಾರ್ಷಿಕ ಗಿಡಗಳನ್ನು ನಾಟಿ ಮಾಡಿ ಮಧ್ಯದಲ್ಲಿ ಕೃಷಿ ಬೆಳೆಗಳನ್ನು ಉಪಯೋಗಿಸಿ ಮಿಶ್ರ ಬೆಳೆ ಪದ್ಧತಿಯನ್ನು ಕೈಗೊಳ್ಳಬಹುದು ಈ ಮೂಲಕ ಭೂ ಬಳಕೆಯ ಮಟ್ಟವನ್ನು ಸುಲಭವಾಗಿ ಹೆಚ್ಚಿಸಬಹುದು. ಈ ಅಂಶಗಳು ಒಣಭೂಮಿಯಲ್ಲಿ ಕಂಡುಬರುವಂತಹ ಲಕ್ಷಣಗಳು ಅಗಿವೆ.

**ಕೋಷ್ಟಕ 1:** ಬಳ್ಳಾರಿ ಜಿಲ್ಲೆಯ ವಿಸ್ತೀರ್ಣ, ಜನಸಂಖ್ಯೆ, ಮತ್ತು ಜನಸಾಂದ್ರತೆ – 2011ರ ಜನಗಣತಿ ವರದಿ

| ಕ್ರಮ ಸಂಖ್ಯೆ | ತಾಲೂಕುಗಳ | ಭೌಗೋಳಿಕ ವಿಸ್ತೀರ್ಣ | ಜನ ಸಾಂದ್ರತೆ | ಜನ ಸಂಖ್ಯೆ | | | ಒಟ್ಟು ಜನಸಂಖ್ಯೆಯ ಶೇಕಡವಾರು | ಸ್ಥಾನ |
|---|---|---|---|---|---|---|---|---|
| | | | | ಗಂಡಸರು | ಹೆಂಗಸರು | ಒಟ್ಟು | | |
| 1 | ಬಳ್ಳಾರಿ | 1142 | 554 | 318930 | 314116 | 633046 | 23 | 01 |
| 2 | ಹಡಗಲಿ | 948 | 206 | 98853 | 96366 | 195219 | 07 | 07 |
| 3 | ಹಗರಿಬೊಮ್ಮನಹಳ್ಳಿ | 950 | 186 | 89684 | 87454 | 177138 | 06 | 08 |
| 4 | ಹರಪನಹಳ್ಳಿ | 1435 | 210 | 154289 | 147714 | 302003 | 11 | 03 |
| 5 | ಹೊಸಪೇಟೆ | 656 | 584 | 179287 | 179980 | 3592267 | 13 | 02 |
| 6 | ಕಂಪ್ಲಿ | 355 | 345 | 60706 | 61511 | 122217 | 04 | 09 |
| 7 | ಕೊಟ್ಟೂರು | 253 | 386 | 49626 | 47802 | 97428 | 04 | 11 |
| 8 | ಕೂಡ್ಲಿಗಿ | 1402 | 159 | 113429 | 109144 | 222573 | 08 | 06 |
| 9 | ಕುರುಗೊಡು | 470 | 247 | 58159 | 58231 | 116390 | 04 | 10 |
| 10 | ಸಿರುಗುಪ್ಪ | 1040 | 259 | 134246 | 134858 | 269104 | 10 | 04 |
| 11 | ಸಂಡೂರು | 1245 | 209 | 134034 | 126179 | 260213 | 09 | 05 |
| | **ಒಟ್ಟು** | 9896 | 278 | 1391243 | 1363355 | 2754598 | 100 | – |

**ಮೂಲ:** 2011ರ ಜನಗಣತಿ ಪ್ರಕಾರ ಮತ್ತು ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ 2020–21

ಈ ಮೇಲಿನ ಕೋಷ್ಟಕವು, ಬಳ್ಳಾರಿ ಜಿಲ್ಲೆಯ ವಿಸ್ತೀರ್ಣ, ಜನಸಾಂದ್ರತೆ ಮತ್ತು ಜನಸಂಖ್ಯೆ 2011ರ ಜನಗಣತಿಯಂತೆ ನೀಡಲಾಗಿದೆ. ಒಂದು ನಿರ್ದಿಷ್ಟವಾದ ಸ್ಥಳವನ್ನು ಗುರುತಿಸಲು ಅದಕ್ಕೆ ಒಂದು ಭೌಗೋಳಿಕ ಪ್ರದೇಶವು ಮುಖ್ಯವಾಗುತ್ತದೆ. ಅ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಜನಸಾಂದ್ರತೆ ಮತ್ತು ಜನ ಸಂಖ್ಯೆಯನ್ನು ತಿಳಿಯುವುದು ಬಹಳ ಮುಖ್ಯವಾಗುತ್ತದೆ. ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶ 1,91,791 ಚ.ಕಿ.ಮೀ ವ್ಯಾಪಿಸಿದ್ದು, ಅದರಲ್ಲಿ ಬಳ್ಳಾರಿ ಜಿಲ್ಲೆಯು 9896 ಚ.ಕಿ.ಮೀ ವ್ಯಾಪಿಸಿದೆ. ರಾಜ್ಯದ ವಿಸ್ತೀರ್ಣದಲ್ಲಿ 4ನೇ ಸ್ಥಾನವನ್ನು ಪಡೆದಿದೆ. ಹರಪನಹಳ್ಳಿ ತಾಲೂಕು ಭೌಗೋಳಿಕವಾಗಿ 1435 ಚ.ಕಿ.ಮೀ ವ್ಯಾಪಿಸಿದ್ದು ಪ್ರಥಮ ಸ್ಥಾನವನ್ನು ಪಡೆದಿದೆ. ಅದೇ ರೀತಿಯಾಗಿ ಭೌಗೋಳಿಕವಾಗಿ ಚಿಕ್ಕ ವ್ಯಾಪ್ತಿಯನ್ನು ಕೊಟ್ಟೂರು ಹೊಂದಿದೆ. 256 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು ಜಿಲ್ಲೆಯಲ್ಲಿ 11ನೇ ಸ್ಥಾನವನ್ನು ಪಡೆದಿದೆ. ಎರಡನೇ ಸ್ಥಾನದಲ್ಲಿ ಕೂಡ್ಲಿಗಿ ತಾಲೂಕು 1402 ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. 3ನೇ ಸ್ಥಾನದಲ್ಲಿ ಬಳ್ಳಾರಿ ತಾಲೂಕು 1142 ಚ.ಕಿ.ಮೀ ವ್ಯಾಪಿಸಿದೆ. ಹಡಗಲಿ, 948 ಚ.ಕಿ.ಮೀ ವ್ಯಾಪಿಸಿದೆ. ಹಗರಿಬೊಮ್ಮನಹಳ್ಳಿ 950 ಚ.ಕಿ.ಮೀ ವ್ಯಾಪಿಸಿದೆ ಹೊಸಪೇಟೆ 656 ಚ.ಕಿ.ಮೀ, ಕಂಪ್ಲಿ 355 ಚ.ಕಿ.ಮೀ ವ್ಯಾಪಿಸಿದೆ, ಕುರುಗೋಡು 470, ಸಿರುಗುಪ್ಪ 1040, ಸಂಡೂರು 1245 ಚ.ಕಿ.ಮೀ ವ್ಯಾಪಿಸಿರುವುದು ಕಂಡುಬರುತ್ತದೆ. ಜನಸಾಂದ್ರತೆಯಲ್ಲಿ ಬಳ್ಳಾರಿ ತಾಲೂಕು 1ನೇ ಸ್ಥಾನವನ್ನು ಪಡೆದಿದ್ದು, 554ರಷ್ಟು ಜನಸಾಂದ್ರತೆಯನ್ನು ಹೊಂದಿದೆ.

ಬಳ್ಳಾರಿ ತಾಲೂಕು ಜನಸಂಖ್ಯೆ 6,33,046 ಹೊಂದಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 23ರಷ್ಟು ಜನಸಂಖ್ಯೆಯನ್ನು ಬಳ್ಳಾರಿ ತಾಲೂಕು ಹೊಂದಿದೆ. ಹಡಗಲಿ ತಾಲೂಕು 206 ಜನಸಾಂದ್ರತೆಯನ್ನು ಹೊಂದಿದ್ದು 1,95,219 ಜನಸಂಖ್ಯೆಯನ್ನು ಇದು ಒಟ್ಟು ಜನಸಂಖ್ಯೆಯಲ್ಲಿ ಶೇಕಡ 7 ರಷ್ಟು ಜನಸಂಖ್ಯೆಯನ್ನು ಹೊಂದಿದ್ದು. ಇದು 7ನೇ ಸ್ಥಾನವನ್ನು ಪಡೆದುಕೊಂಡಿದೆ. ಅದೇ ರೀತಿಯಾಗಿ ಹಗರಿಬೊಮ್ಮನಹಳ್ಳಿ 186 ಜನಸಂದ್ರತೆಯನ್ನು ಹೊಂದಿದ್ದು ಒಟ್ಟು 1,77,138 ಜನಸಂಖ್ಯೆಯನ್ನು ಹೊಂದಿದೆ. ಇದು ಜನಸಾಂದ್ರತೆಯಲ್ಲಿ 8ನೇ ಸ್ಥಾನವನ್ನು ಹೊಂದಿದೆ ಹರಪನಹಳ್ಳಿ ತಾಲೂಕು ಭೌಗೋಳಿಕವಾಗಿ ವಿಶಾಲವಾಗಿದ್ದು 210 ಜನಸಾಂದ್ರತೆಯನ್ನು ಹೊಂದಿದ್ದು 3ನೇ ಸ್ಥಾನವನ್ನು ಪಡೆದುಕೊಂಡಿದೆ ಇದು ಒಟ್ಟಾರೆಯಾಗಿ 3,02,003 ಜನಸಂಖ್ಯೆಯಲ್ಲಿ ಶೇಕಡ 11ರಷ್ಟು ಜನ ಸಂಖ್ಯೆಯನ್ನು ಹೊಂದಿದೆ. ಹೊಸಪೇಟೆಯು ಭೌಗೋಳಿಕವಾಗಿ ಚಿಕ್ಕದಾಗಿದ್ದರೂ ಸಹ ಜನಸಾಂದ್ರತೆಯಲ್ಲಿ 548 ಪಡೆದುಕೊಂಡು 2 ನೇ ಸ್ಥಾನದಲ್ಲಿರುವುದು ಕಂಡುಬರುತ್ತದೆ.

ಕಂಪ್ಲಿಯು ಭೌಗೋಳಿಕವಾಗಿ ಚಿಕ್ಕದಾಗಿದ್ದರೂ ಸಹ ಜನಸಂಖ್ಯೆಯಲ್ಲಿ ಶೇಕಡ 4 ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಜನಸಾಂದ್ರತೆಯಲ್ಲಿ 9ನೇ ಸ್ಥಾನವನ್ನು ಪಡೆದುಕೊಂಡಿದೆ. ಕುರುಗೋಡು ಇದು 247 ಜನ ಸಾಂದ್ರತೆಯನ್ನು ಹೊಂದಿದ್ದು ಒಟ್ಟು ಜನ ಸಂಖ್ಯೆ 1,16,390 ಹೊಂದಿದೆ ಜನಸಂಖ್ಯೆಯಲ್ಲಿ ಶೇಕಡ 4 ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಇದು 10ನೇ ಸ್ಥಾನವನ್ನು ಪಡೆದುಕೊಂಡಿದೆ. ಸಿರುಗುಪ್ಪ ತಾಲೂಕು 259 ಜನಸಾಂದ್ರತೆಯನ್ನು ಹೊಂದಿದ್ದು ಒಟ್ಟು ಜನಸಂಖ್ಯೆ 2,69,104 ಆಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 10ರಷ್ಟು ಸಿರುಗುಪ್ಪ ತಾಲೂಕು ಹೊಂದಿದೆ. ಅದೇ ರೀತಿಯಾಗಿ ಸಂಡೂರು 209 ಜನಸಾಂದ್ರತೆಯನ್ನು ಹೊಂದಿದ್ದು 5ನೇ ಸ್ಥಾನವನ್ನು ಪಡೆದಿದೆ. ಒಟ್ಟು ಜನಸಂಖ್ಯೆ 2,60,213ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಶೇಕಡ 9ರಷ್ಟು ಜನಸಂಖ್ಯೆಯನ್ನು ಜಿಲ್ಲೆಯಲ್ಲಿ ಹೊಂದಿರುವುದು ಮೇಲಿನ ಕೋಷ್ಟಕದಲ್ಲಿ ಕಂಡುಬರುತ್ತದೆ.

**ಕೋಷ್ಟಕ 2:** ಬಳ್ಳಾರಿ ಜಿಲ್ಲೆಯ ಗ್ರಾಮೀಣ ಮತ್ತು ನಗರ ಜನಸಂಖ್ಯೆ (ಜನಸಂಖ್ಯೆ 2011)

| ಕ್ರ.ಸಂ | ತಾಲೂಕು | ಗ್ರಾಮೀಣ | | | ನಗರ | | | ಒಟ್ಟು |
|---|---|---|---|---|---|---|---|---|
| | | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ನಗರ ಮತ್ತು ಗ್ರಾಮೀಣ ಪ್ರದೇಶ |
| 1 | ಬಳ್ಳಾರಿ | 103120 | 101266 | 204386 | 215810 | 212850 | 428660 | 633046 |
| 2 | ಹಡಗಲಿ | 84819 | 82433 | 167252 | 14034 | 13933 | 27967 | 195219 |
| 3 | ಹಗರಿಬೊಮ್ಮನಹಳ್ಳಿ | 72266 | 70055 | 142321 | 17418 | 17399 | 34817 | 177138 |
| 4 | ಹರಪನಹಳ್ಳಿ | 130398 | 124566 | 254964 | 23891 | 23148 | 47039 | 302003 |
| 5 | ಹೊಸಪೇಟೆ | 56154 | 55454 | 111608 | 123133 | 124526 | 247659 | 359267 |
| 6 | ಕಂಪ್ಲಿ | 41230 | 41680 | 82910 | 19476 | 19831 | 39307 | 122217 |
| 7 | ಕೊಟ್ಟೂರು | 36436 | 34703 | 71139 | 13190 | 13099 | 26289 | 97428 |
| 8 | ಕೂಡ್ಲಿಗಿ | 100001 | 95892 | 195893 | 13428 | 13252 | 26680 | 222573 |
| 9 | ಕುರುಗೊಡು | 47177 | 47261 | 94438 | 10982 | 10970 | 21952 | 116390 |
| 10 | ಸಿರುಗುಪ್ಪ | 94949 | 95439 | 190388 | 39297 | 39419 | 78716 | 269104 |
| 11 | ಸಂಡೂರು | 102420 | 97802 | 200222 | 31614 | 28377 | 59991 | 260213 |
| | ಒಟ್ಟು | 868970 | 846551 | 1715521 | 522273 | 516804 | 1039077 | 2754598 |

**ಮೂಲ:** 2011 ಜನಗಣತಿ ಪ್ರಕಾರ ಮತ್ತು ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ2020–21

ಈ ಮೇಲಿನ ಕೋಷ್ಟಕದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ಜನಸಂಖ್ಯೆಯನ್ನು ತಿಳಿಸಲಾಗಿದ್ದು ಇಲ್ಲಿ ಬಹುಮುಖ್ಯವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಇರುವ ಜನಸಂಖ್ಯೆ ವ್ಯತ್ಯಾಸವನ್ನು ತಿಳಿಯಲು ಈ ಕೊಷ್ಟಕ ಸಹಾಯಕವಾಗಿದೆ. ಕರ್ನಾಟಕದಲ್ಲಿ 3,70,97,374 (ಕರ್ನಾಟಕ ಅಂಕಿ ಅಂಶಗಳ ನೋಟ 2020–21) ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು. ಇದರಲ್ಲಿ ಮಹಿಳೆಯರು 1,83,55,861 ರಷ್ಟುದ್ದಾರೆ. ಪುರುಷರು 1,87,41,513ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಅದೇ ರೀತಿಯಾಗಿ ನಗರ ಪ್ರದೇಶದ ಜನಸಂಖ್ಯೆಯು 2,39,97,923 ಹೊಂದಿದ್ದು, ಇದರಲ್ಲಿ ಪುರುಷರು 1,22,25,144, ಮಹಿಳೆಯರು 1,17,72,779 ಇದ್ದಾರೆ. ನಗರ ಮತ್ತು ಗ್ರಾಮೀಣ ಒಟ್ಟು ಜನಸಂಖ್ಯೆಯು 6,10,95,297 ಹೊಂದಿದ್ದು ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲಾ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಒಟ್ಟು 27,54,598 ಜನಸಂಖ್ಯೆಯನ್ನು ಹೊಂದಿದ್ದು. ಬಳ್ಳಾರಿ ತಾಲೂಕಿನಲ್ಲಿ ನಗರ ಪ್ರದೇಶದಲ್ಲಿ ವಾಸಿಸುವ ಜನ ಸಂಖ್ಯೆ 4,28,660 ಆಗಿದೆ ಇದರಲ್ಲಿ ಮಹಿಳೆಯರು 2,15,810 ರಷ್ಟಿದ್ದು ಪುರಷರು 2,12,850 ರಷ್ಟುದ್ದಾರೆ. ಅದೇ ರೀತಿಯಾಗಿ ಗ್ರಾಮೀಣ ಪ್ರದೇಶವನ್ನು ನೋಡಿದರೆ ಒಟ್ಟು ಜನಸಂಖ್ಯೆ 2,04,386 ಹೊಂದಿದ್ದು ಪುರುಷರ 1,03,120 ಹೆಂಗಸರು 1,01,266 ರಷ್ಟು ಇದ್ದಾರೆ ಬಳ್ಳಾರಿ ಜಿಲ್ಲೆ ತಾಲೂಕುಗಳಲ್ಲಿ ನಗರ ಪ್ರದೇಶಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿದೆ. ಗ್ರಾಮೀಣ ಪ್ರದೇಶದ ಜನರು ಉದ್ಯೋಗವನ್ನು ಹುಡುಕಿಕೊಂಡು ನಗರ ಪ್ರದೇಶಗಳಿಗೆ ಬರುವುದು ಸಹಜವಾಗಿದ್ದು ಕೆಲವು ಸಂದರ್ಭದಲ್ಲಿ ಈ ನಗರ ಪ್ರದೇಶಗಳಲ್ಲಿ ವಾಸಮಾಡುವಂತಹ ಸ್ಥಿತಿಯು ನಿರ್ಮಾಣವಾಗುತ್ತದೆ. ಈ ರೀತಿಯ ಸಂದರ್ಭವು ಇದ್ದರೂ ಕೂಡ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುವವರು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಬಳ್ಳಾರಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವಂತಹ ಜನಸಂಖ್ಯೆಯು ನಗರ ಪ್ರದೇಶದ ಜನಸಂಖ್ಯೆಗಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವುದು ಕಂಡುಬರುತ್ತದೆ. ಹಡಗಲಿ ತಾಲೂಕನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 1,67,252 ಜನಸಂಖ್ಯೆ ಕಂಡುಬಂದಿದ್ದು. ನಗರ ಪ್ರದೇಶದಲ್ಲಿ 27,967 ರಷ್ಟು ಜನ ಸಂಖ್ಯೆಯನ್ನು ಹೊಂದಿದೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಜನಸಂಖ್ಯೆಯನ್ನು ವಿಶ್ಲೇಷಣೆ ಮಾಡಿದರೆ ನಗರ ಪ್ರದೇಶದಲ್ಲಿ ವಾಸವಾಗಿರುವ ಜನಸಂಖ್ಯೆಯು 34,817 ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಗ್ರಾಮೀಣ ಪ್ರದೇಶದ ಜನಂಖ್ಯೆ 1,42,321 ಹೊಂದಿದೆ ಇಲ್ಲೂ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಜನಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದೆ ಗ್ರಾಮೀಣ ಪ್ರದೇಶದ ಜನರು ಕೃಷಿಯನ್ನು ಅವಲಂಬಿಸಿ ಕೆಲಸ ಮಾಡುವಂತಹ ಜನರು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತಾರೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಒಟ್ಟು ಜನ ಸಂಖ್ಯೆಯನ್ನು ಗಮನಿಸಿದರೆ 2,22,573 ರಷ್ಟು ಹೊಂದಿದ್ದು, ಅದರಲ್ಲಿ ಗ್ರಾಮೀಣ ಭಾಗದ ಜನಸಂಖ್ಯೆಯು 1,95,893 ರಷ್ಟಿದ್ದಾರೆ ನಗರ ಪ್ರದೇಶದ ಜನಸಂಖ್ಯೆಯು 26,680 ರಷ್ಟು ಜನರು ನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ. ಒಟ್ಟಾರೆಯಾಗಿ ಗ್ರಾಮೀಣ ಪ್ರದೇಶದ ಜನ ಸಂಖ್ಯೆಯು ನಗರ ಪ್ರದೇಶದ ಜನ ಸಂಖ್ಯೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದು ಈ ಕೋಷ್ಟಕದಿಂದ ಕಂಡುಬರುತ್ತದೆ.

**ಕೋಷ್ಟಕ 3:** ಬಳ್ಳಾರಿ ಜಿಲ್ಲೆಯ ಕೃಷಿ ಕಾರ್ಮಿಕರು 2011 ಜನಗಣತಿ (ಸಂಖ್ಯೆಗಳಲ್ಲಿ)

| ಕ್ರಮ ಸಂಖ್ಯೆ | ತಾಲೂಕುಗಳು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|---|
| | | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| 1 | ಬಳ್ಳಾರಿ | 21091 | 26798 | 47889 | 4420 | 3993 | 8413 | 25511 | 30791 | 56302 |
| 2 | ಹಡಗಲಿ | 22713 | 27594 | 50307 | 1014 | 778 | 1792 | 23727 | 28372 | 52099 |
| 3 | ಹಗರಿಬೊಮ್ಮನಹಳ್ಳಿ | 15847 | 24882 | 40729 | 981 | 1414 | 2401 | 16834 | 26296 | 43130 |
| 4 | ಹರಪನಹಳ್ಳಿ | 27379 | 35840 | 63219 | 1283 | 1164 | 2450 | 28662 | 37007 | 65669 |
| 5 | ಹೊಸಪೇಟೆ | 10335 | 12331 | 22666 | 5990 | 4705 | 10695 | 16325 | 17036 | 33361 |
| 6 | ಕಂಪ್ಲಿ | 11480 | 13686 | 25166 | 2356 | 2410 | 4766 | 13836 | 16096 | 29932 |
| 7 | ಕೊಟ್ಟೂರು | 5946 | 10112 | 16058 | 403 | 489 | 892 | 6349 | 10601 | 16950 |
| 8 | ಕೂಡ್ಲಿಗಿ | 18914 | 27089 | 46003 | 1034 | 1689 | 2723 | 19948 | 28778 | 48726 |
| 9 | ಕುರುಗೋಡು | 10576 | 14401 | 24977 | 2678 | 3081 | 5759 | 13254 | 17482 | 30736 |
| 10 | ಸಿರುಗುಪ್ಪ | 25362 | 34083 | 59445 | 5011 | 6279 | 11290 | 30373 | 40362 | 70735 |
| 11 | ಸಂಡೂರು | 8636 | 13496 | 22132 | 1199 | 790 | 1989 | 9835 | 14286 | 24121 |
| | ಒಟ್ಟು | 178279 | 240312 | 418591 | 26375 | 26795 | 53170 | 204654 | 267107 | 471716 |

**ಮೂಲ:** 2011 ಜನಗಣತಿ ಮತ್ತು ವಾರ್ಷಿಕ ಅಂಕಿ ಅಂಶಗಳು 2019–20

ಈ ಮೇಲಿನ ಕೋಷ್ಟಕದಲ್ಲಿ ಬಳ್ಳಾರಿ ಜಿಲ್ಲಾ ಕೃಷಿ ಕಾರ್ಮಿಕರ ಬಗ್ಗೆ ತಿಳಿಸುತ್ತದೆ. ಬಳ್ಳಾರಿ ಜಿಲ್ಲೆಯ ಔದ್ಯೋಗಿಕ ರಚನೆಯನ್ನು ನೋಡಿದರೆ ಕೃಷಿ ಕೃಷಿಕರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಈ ಕಾರ್ಮಿಕರು ಕೃಷಿ ಕೆಲಸದಲ್ಲಿ ನಿರಂತರಾಗಿರುತ್ತಾರೆ. ಇವರು ಕೃಷಿ ಕೆಲಸವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸವನ್ನು ಇವರು ನಿರ್ವಹಿಸುವುದಿಲ್ಲ. ಕೃಷಿಯೇ ಇವರಿಗೆ ಮುಖ್ಯ ವೃತ್ತಿಯಾಗಿರುತ್ತದೆ, ಅದೇ ರೀತಿಯಾಗಿ ಕೃಷಿ ಕಾರ್ಮಿಕರು ಒಟ್ಟು

4,06,092 ಜನರಿದ್ದು ಇವರು ಕೃಷಿ ಕೆಲಸದ ಜೊತೆಯಲ್ಲಿ ವಿವಿಧ ಕೆಲಸವನ್ನು ನಿರ್ವಹಿಸುತ್ತಾರೆ. ಕೃಷಿ ಕೆಲಸದ ಜೊತೆಯಲ್ಲಿ ಅದಕ್ಕೆ ಪೂರಕವಾಗಿರುವಂತಹ ಕೆಲಸವನ್ನು ಇವರುಗಳು ಮಾಡುತ್ತಾರೆ. ಕೈಗಾರಿಕಾ ಕಾರ್ಮಿಕರು ಇವರು ಕೈಗಾರಿಕೆಗಲ್ಲಿ ಕೆಲಸ ಮಾಡುವಂತವರು ಅಗಿದ್ದು. ಇವರು 22832 ಇದ್ದು ಕೈಗಾರಿಕೆಗಳಿಗೆ ಶಕ್ತಿಯನ್ನು ಒದಗಿಸುವ ಕೆಲಸವನ್ನು ಮಾಡುತ್ತಾರೆ. ಇನ್ನು ಉಳಿದಂತೆ ಇತರೆ ಕೆಲಸ ಮಾಡುವಂತವರು 429876 ಜನಸಂಖ್ಯೆಯನ್ನು ಹೊಂದಿದ್ದು ಇವರು ಅನೇಕ ರೀತಿಯ ಕೆಲಸಗಳನ್ನು ಮಾಡುತ್ತಾರೆ.

ಜಿಲ್ಲೆಯ ಕೃಷಿ ಕಾರ್ಮಿಕರು ಕೃಷಿಯನ್ನು ಅವಲಂಬಿಸಿ ಕೃಷಿ ಕಾರ್ಯವನ್ನು ಮಾಡುತ್ತಾರೆ. ಕೃಷಿಯನ್ನು ಹೊರತುಪಡಿಸಿ ಬೇರೆ ಬೇರೆ ಕೆಲಸಗಳಲ್ಲಿ ತೊಡಿಸಿಕೊಳ್ಳಲು ನಿರುದ್ಯೋಗದ ಸಮಸ್ಯೆಯು ಕಾಡುತ್ತಿದೆ. ಕೃಷಿ ಕಾರ್ಮಿಕರು ಗ್ರಾಮೀಣ ಪ್ರದೇಶಕ್ಕಿಂತಲೂ ನಗರ ಪ್ರದೇಶಗಳಲ್ಲಿ ಹೆಚ್ಚಿನ ಕೃಷಿ ಕಾರ್ಮಿಕರಿದ್ದಾರೆ ಎಂದು ಈ ವರದಿಯು ತಿಳಿಸುತ್ತದೆ. ಹರಪನಹಳ್ಳಿ ತಾಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಮಿಕರು 63219 ಕೃಷಿ ಕಾರ್ಮಿಕರಿದ್ದು ಜಿಲ್ಲೆಯಲ್ಲಿ ಅಧಿಕ ಪ್ರಮಾಣ ಕೃಷಿ ಕಾರ್ಮಿಕರು ಹೊಂದಿರುವ ತಾಲೂಕು ಅಗಿದೆ. ನಗರ ಪ್ರದೇಶದಲ್ಲಿ ಸಿರುಗುಪ್ಪ ತಾಲೂಕು ಅಧಿಕ ಪ್ರಮಾಣದ ಕೃಷಿ ಕಾರ್ಮಿಕರನ್ನು ಹೊಂದಿದೆ ಈ ಕೃಷಿ ಕಾರ್ಮಿಕರಿಗೆ ವರ್ಷದಲ್ಲಿ ಕೆಲವು ತಿಂಗಳುಗಳ ಕಾಲ ಮಾತ್ರ ಹೆಚ್ಚಿನ ಉದ್ಯೋಗವು ಕಂಡುಬರುತ್ತದೆ. ತದನಂತರದಲ್ಲಿ ಉದ್ಯೋಗದ ಕೊರತೆಯನ್ನು ಎದುರಿಸುತ್ತಾರೆ. ಒಟ್ಟಾರೆಯಾಗಿ ಇಲ್ಲಿ ಕೃಷಿ ಕಾರ್ಮಿಕರು ನಗರ ಪ್ರದೇಶದಲ್ಲಿರುವುದು ಕಂಡುಬರುತ್ತದೆ.

**ಕೋಷ್ಟಕ 4:** ಲಿಂಗಾನುಪಾತ: 2001 ಮತ್ತು 2011

| ಕ್ರಮ ಸಂಖ್ಯೆ | ತಾಲೂಕುಗಳು | ಲಿಂಗಾನುಪಾತ 2001 | | | ಲಿಂಗಾನುಪಾತ 2011 | | | ದಶಕದ ಶೇಕಡವಾರು ಬದಲಾವಣೆ |
|---|---|---|---|---|---|---|---|---|
| | | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು | |
| 1 | ಬಳ್ಳಾರಿ | 971 | 946 | 955 | 982 | 986 | 985 | 3.14 |
| 2 | ಹಡಗಲಿ | 977 | 972 | 977 | 972 | 993 | 975 | –0.2 |
| 3 | ಹಗರಿಬೊಮ್ಮನಹಳ್ಳಿ | 982 | 970 | 980 | 969 | 999 | 975 | –0.51 |
| 4 | ಹರಪನಹಳ್ಳಿ | 961 | 915 | 953 | 955 | 969 | 957 | 0.42 |
| 5 | ಹೊಸಪೇಟೆ | 985 | 966 | 972 | 988 | 1011 | 1004 | 3.29 |
| 6 | ಕಂಪ್ಲಿ | 993 | 988 | 991 | 1011 | 1018 | 1013 | 2.22 |
| 7 | ಕೊಟ್ಟೂರು | 964 | 921 | 953 | 952 | 993 | 963 | 1.05 |
| 8 | ಕೂಡ್ಲಿಗಿ | 954 | 974 | 958 | 959 | 987 | 962 | 0.42 |
| 9 | ಕುರುಗೋಡು | 989 | 972 | 986 | 1002 | 999 | 1001 | 1.52 |
| 10 | ಸಿರುಗುಪ್ಪ | 1002 | 991 | 999 | 1005 | 1003 | 1005 | 0.6 |
| 11 | ಸಂಡೂರು | 951 | 912 | 945 | 955 | 898 | 941 | –0.42 |
| | ಒಟ್ಟು | 973 | 957 | 966 | 976 | 987 | 980 | 1.45 |

**ಮೂಲ:** 2011 ರ ಜನಗಣತಿಯ ಪ್ರಕಾರ ಜಿಲ್ಲಾ ಅಂಶಗಳ ನೋಟ ವರದಿ, 2020–21

**ಲಿಂಗಾನುಪಾತ**

ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗಾನುಪಾತ ಎಂದು ಕರೆಯುತ್ತಾರೆ. ಇಲ್ಲಿ ಪುರಷರು ಮತ್ತು ಮಹಿಳೆರು ಸಮಾನ ಸಂಖ್ಯೆಯಲ್ಲಿದ್ದರೆ ಯಾವುದೇ ರೀತಿಯ ಸಮಸ್ಯೆಗಳು ಉದ್ಭವಿಸಯವುದಿಲ್ಲ ಅದರೆ, ಮಹಿಳೆಯರು ಸಂಖ್ಯೆ ಕಡಿಮೆಯಿದ್ದು ಪುರಷರ ಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರೆ ಅಲ್ಲಿ ಲಿಂಗಾನುಪಾತವು ಕಡಿಮೆಯಿದೆ ಎಂದು ಗುರುತಿಸಬಹುದು. ಕರ್ನಾಟಕದ ಲಿಂಗಾನುಪಾತವನ್ನು ಗಮನಿಸಿದರೆ 2011ರ ಜನಗಣತಿಯ ವರದಿಯ ಪ್ರಕಾರ, ಒಟ್ಟು ಲಿಂಗಾನುಪಾತವು ಸಾವಿರ ಪುರಷರಿಗೆ 973 (ಕರ್ನಾಟಕ ಅಂಶಗಳ ನೋಟ, 2020–21) ಮಹಿಳೆಯರು ಇರುವುದು ದಾಖಲಾಗಿದೆ. ಇದು 2001ರಲ್ಲಿ 965 ಲಿಂಗಾನುಪಾತವನ್ನು ಹೊಂದಿದೆ ನಗರ ಪ್ರದೇಶದ ಲಿಂಗಾನುಪಾತವು 2001ರಲ್ಲಿ 942ರಷ್ಟಿದ್ದು, 2011 ರಲ್ಲಿ 963 ರಷ್ಟು ಇರುವುದು ಕಂಡುಬರುತ್ತದೆ. ಈ ಹಿಂದಿನ 2001ರ ಲಿಂಗಾನುಪಾತವನ್ನು ಗಮನಿಸಿದರೆ 2011ರ ಚೇತರಿಕೆ ಪ್ರಮಾಣದಲ್ಲಿರುವುದು ಸ್ಪಷ್ಟವಾಗಿದೆ. ಗ್ರಾಮೀಣ ಪ್ರದೇಶದ ಲಿಂಗಾನುಪಾತವು 2001ರಲ್ಲಿ 977ಇದ್ದು, 2011ರಲ್ಲಿ 979 ಅಗಿರುವುದು ಗಮನಿಸಬಹುದುದಾಗಿದೆ. ಈ ದಶಕದಲ್ಲಿ 0.83 ರಷ್ಟು ಬದಲಾವಣೆಯಾಗಿರುವುದು ಗುರುತಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಅಂಕಿ ಅಂಶವನ್ನು ಗಮನಿಸಿದರೆ, 2001ರ ಲಿಂಗಾನುಪಾತದಂತೆ 966 ರಷ್ಟು ಇದ್ದು ಇದು 2011ರಲ್ಲಿ 980ರಷ್ಟು ಅಗಿದೆ ಈ ದಶಕದಲ್ಲಿ ಶೇಕಡ 1.45 ರಷ್ಟು ಬದಲಾವಣೆಯಾಗಿದೆ. 2001ರ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಲಿಂಗಾನುಪಾತವು 973ರಷ್ಟು ಇದ್ದು, 2011ರಲ್ಲಿ 976 ರಷ್ಟು ಅಗಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಬಳ್ಳಾರಿ ಜಿಲ್ಲಾ ನಗರ ಪ್ರದೇಶದ ಲಿಂಗಾನುಪಾತವು 2001ರಲ್ಲಿ 957 ರಷ್ಟು ದಾಖಲಾಗಿದ್ದು, 2011 ರಲ್ಲಿ 987 ಅಗಿರುವುದು ಗಮನಾರ್ಹ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಹಡಗಲಿ ತಾಲೂಕುನಲ್ಲಿ 2001 ಪ್ರಕಾರ 977 ಲಿಂಗಾನುಪಾತವನ್ನು ಹೊಂದಿದ್ದು, ಇದು 2011 ರಲ್ಲಿ 975 ಲಿಂಗಾನುಪಾತದಂತೆ ದಾಖಲಾಗಿದೆ. ಈ ದಶಕದಲ್ಲಿ –0.2 ಕಡಿಮೆ ಪ್ರಮಾಣ ಲಿಂಗಾನುಪಾತವಾಗಿವುದು ಕಂಡುಬರುತ್ತದೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಲಿಂಗಾನುಪಾತವು 2001ರಲ್ಲಿ 980 ರಷ್ಟಿರುವುದು 2011ರಲ್ಲಿ 975 ರಷ್ಟು ಅಗಿರುವುದು ಕಂಡುಬರುತ್ತದೆ ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಲಿಂಗಾನುಪಾತವು ಕಡಿಮೆಯಾಗಿರುವುದು ಸ್ಪಷ್ಟವಾಗಿದೆ. ಕೂಡ್ಲಿಗಿ ತಾಲೂಕನ್ನು ಗಮನಿಸಿದರೆ 2001ರಲ್ಲಿ 958 ಲಿಂಗಾನುಪಾತವನ್ನು ಹೊಂದಿದ್ದು, 2011 ರಲ್ಲಿ 962 ರಷ್ಟು ಅಗಿದೆ. ಈ ತಾಲೂಕುನಲ್ಲಿ ಲಿಂಗಾನುಪಾತ ಶೇಕಡ 0.42 ಹೆಚ್ಚಾಗಿದೆ. ಒಟ್ಟಾರೆಯಾಗಿ ಈ ಲಿಂಗಾನುಪಾತದಲ್ಲಿ ಕಳೆದ 10 ವರ್ಷಗಳಲ್ಲಿ ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ಕಡಿಮೆ ಪ್ರಮಾಣದ ಲಿಂಗಾನುಪಾತವನ್ನು ಕಂಡರೆ ಕೂಡ್ಲಿಗಿ ತಾಲೂಕು ಹೆಚ್ಚಿನ ಪ್ರಮಾಣದ ಲಿಂಗಾನುಪಾತವನ್ನು ಹೊಂದಿರುವು ಪ್ರಶಂಸನೀಯವಾಗಿದೆ.

**ಕೋಷ್ಟಕ 5:** ಬಳ್ಳಾರಿ ಜಿಲ್ಲೆಯ ಸಾಕ್ಷರತಾ ಪ್ರಮಾಣ (2011 ಜನಗಣತಿ)

| ಕ್ರ ಸಂ | ತಾಲೂಕುಗಳು | ಗ್ರಾಮೀಣ | | | ನಗರ | | | ಒಟ್ಟು | | | ಸ್ಥಾನ |
|---|---|---|---|---|---|---|---|---|---|---|---|
| | | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | |
| 1 | ಬಳ್ಳಾರಿ | 69.55 | 45.69 | 57.72 | 84.52 | 71.15 | 77.87 | 79.75 | 63.05 | 71.45 | 3 |
| 2 | ಹಡಗಲಿ | 80.01 | 60.17 | 70.22 | 82.56 | 71.75 | 77.17 | 80.38 | 61.86 | 71.23 | 4 |
| 3 | ಹಗರಿಬೊಮ್ಮನಹಳ್ಳಿ | 77.46 | 56.73 | 67.24 | 85.56 | 70.63 | 78.06 | 79.05 | 59.55 | 69.4 | 5 |
| 4 | ಹರಪನಹಳ್ಳಿ | 76.77 | 57.62 | 67.41 | 76.71 | 67.19 | 72.03 | 76.76 | 59.12 | 68.13 | 6 |
| 5 | ಹೊಸಪೇಟೆ | 69.89 | 49.23 | 59.59 | 84.49 | 70.88 | 77.62 | 80.01 | 64.35 | 72.14 | 2 |
| 6 | ಕಂಪ್ಲಿ | 67.15 | 46.47 | 56.72 | 81.32 | 63.84 | 72.44 | 71.74 | 52.14 | 61.83 | 9 |
| 7 | ಕೊಟ್ಟೂರು | 79.9 | 60.89 | 70.61 | 89.9 | 77.68 | 83.8 | 82.59 | 65.55 | 74.21 | 1 |
| 8 | ಕೂಡ್ಲಿಗಿ | 75.92 | 55.51 | 65.93 | 84.51 | 70.49 | 77.54 | 76.94 | 57.34 | 67.33 | 7 |
| 9 | ಕುರುಗೊಡು | 66.24 | 43.91 | 55.02 | 67.06 | 46.61 | 56.78 | 66.4 | 44.41 | 55.35 | 10 |
| 10 | ಸಿರುಗುಪ್ಪ | 61.77 | 38.39 | 50 | 70.21 | 52.03 | 61.08 | 64.26 | 42.4 | 53.26 | 11 |
| 11 | ಸಂಡೂರು | 74.18 | 53.01 | 63.84 | 84.42 | 67.69 | 76.59 | 76.63 | 56.32 | 66.81 | 8 |
| | ಒಟ್ಟು | 73.06 | 51.96 | 62.62 | 83.24 | 69.5 | 76.4 | 76.65 | 58.2 | 67.5 | – |

**ಮೂಲ:** 2011 ರ ಜನಗಣತಿ ಪ್ರಕಾರ ಮತ್ತು ಜಿಲ್ಲಾ ಅಂಕಿ ಅಂಶಗಳ ನೋಟ ವರದಿ 2020–21

ವ್ಯಕ್ತಿಯ ವ್ಯಕ್ತಿತ್ವದ ವಿಕಾಶನಕ್ಕೆ ಶಿಕ್ಷಣವು ಬಹಳ ಮುಖ್ಯವಾಗುತ್ತದೆ. ಶಿಕ್ಷಣವನ್ನು ಪಡೆದಿರುವಂತಹ ವ್ಯಕ್ತಿಯು ಸಾಮಾಜದ ಅಭಿವೃದ್ಧಿಗೆ ಕೊಡುಗೆಯಾಗಿರುತ್ತಾನೆ. ಒಬ್ಬ ವ್ಯಕ್ತಿ ಸಮಾಜದಲ್ಲಿ ಸುಸಂಸ್ಕೃತ ವ್ಯಕ್ತಿಯಾಗಿ ಬದುಕುತ್ತಿದ್ದಾನೆ ಎಂದರೆ ಅದಕ್ಕೆ ಶಿಕ್ಷಣವು ಕಾರಣವಾಗುತ್ತದೆ. ಅದೇ ರೀತಿಯಾಗಿ ಶಿಕ್ಷಣ ಪಡೆದ ವ್ಯಕ್ತಿಯು ಸಮಾಜದಲ್ಲಿ ಗೌರವಯುತ ಜೀವನ ಮಾಡಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಶಿಕ್ಷಣವನ್ನು ಪಡೆದ ವ್ಯಕ್ತಿಗಳು ತುಂಬಿರುವ ಸಮಾಜವು

ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಮನುಷ್ಯನಿಗೆ ಅವಶ್ಯಕವಾಗಿರುವ ಸಂಪನ್ಮೂಲಗಳಲ್ಲಿ ಶಿಕ್ಷಣವು ಮುಖ್ಯ. ಹಾಗೆಯೇ ಸಾಕ್ಷರತೆಯು ದೇಶ, ರಾಜ್ಯ, ಜಿಲ್ಲೆಯ ಅಭಿವೃದ್ಧಿಗೆ ಮುಖ್ಯ ಪಾತ್ರವಹಿಸುತ್ತದೆ. 2011ರ ಜನಗಣತಿಯ ಪ್ರಕಾರ ದೇಶದ ಸಾಕ್ಷರತೆಯ ಪ್ರಮಾಣವು 73.0 ಅಗಿದ್ದು ಇದರಲ್ಲಿ ಪುರುಷರು ಸಾಕ್ಷರತಾ ಪ್ರಮಾಣವು 80.9ರಷ್ಟಿದೆ. ಇದ್ದು ಮಹಿಳೆಯರ ಸಾಕ್ಷರತೆಯು ಪ್ರಮಾಣವು 64.6 ರಷ್ಟು ಹೊಂದಿದೆ. ಮಹಿಳೆಯ ಸಾಕ್ಷರತೆ ಪ್ರಮಾಣ ಕಡಿಮೆಯಾಗಿರುವುದು ಕಂಡುಬರುತ್ತದೆ.

ರಾಜ್ಯದ ಸಾಕ್ಷರತೆಯನ್ನು ಗಮನಿಸಿದರೆ ಒಟ್ಟು ಸಾಕ್ಷರತೆಯ ಪ್ರಮಾಣವು 75.36 ರಷ್ಟಿದ್ದು ಇದರಲ್ಲಿ ಪುರಷರ ಸಾಕ್ಷರತೆಯ ಪ್ರಮಾಣವು 82.47 ಅಗಿರುತ್ತದೆ. ಮಹಿಳೆಯರ ಸಾಕ್ಷರತೆಯು ಪ್ರಮಾಣವು 68.08 ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಮಹಿಳೆಯ ಸಾಕ್ಷರತೆ ಪ್ರಮಾಣವು ದೇಶ ಮತ್ತು ರಾಜ್ಯದಲ್ಲಿ ಕಡಿಮೆಯಿದೆ. ರಾಜ್ಯವು ದೇಶದ ಸಾಕ್ಷರತೆ ಪ್ರಮಾಣಕ್ಕಿಂತ ಹೆಚ್ಚು ಇರುವುದು ಗುರುತಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ಸಾಕ್ಷರತೆಯು 67.5 ರಷ್ಟು ಜಿಲ್ಲೆಯಲ್ಲಿ ಪುರಷರ ಸಾಕ್ಷರತೆ 76.65 ರಷ್ಟು ಪ್ರಮಾಣವು, ಮಹಿಳೆಯರ ಸಾಕ್ಷರತೆ 58.2 ಪ್ರಮಾಣ ದಲ್ಲಿರುತ್ತದೆ. ಗ್ರಾಮೀಣ ಪ್ರದೇಶದ ಸಾಕ್ಷರತೆಯ ಪ್ರಮಾಣವು 62.62 ರಷ್ಟಿದ್ದು ನಗರ ಪ್ರದೇಶದ ಸಾಕ್ಷರತಾ ಪ್ರಮಾಣವು 76.5 ರಷ್ಟು ಇರುವುದು ದಾಖಲಾಗಿದೆ. ಗ್ರಾಮೀಣ ಪ್ರದೇಶಗಳಿಂತ ನಗರ ಪ್ರದೇಶದಲ್ಲಿ ಸಾಕ್ಷರತೆಯ ಪ್ರಮಾಣದ ಹೆಚ್ಚಿರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸರಿಯಾದ ಸೌಲಭ್ಯಗಳು ದೊರೆಯದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದರಿಂದ ಶಿಕ್ಷಣದಿಂದ ದೂರ ಉಳಿದಿರುವುದು ಹೆಚ್ಚಾಗಿದೆ. ಹಡಗಲಿ ತಾಲೂಕಿನ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಒಟ್ಟು ಸಾಕ್ಷರತಾ ಪ್ರಮಾಣವು 71.23 ರಷ್ಟಿದೆ ಇದರಲ್ಲಿ ಪರುಷರ ಸಾಕ್ಷರತೆಯ ಪ್ರಮಾಣವು 80.38 ಅಗಿದ್ದು, ಮಹಿಳೆಯರ ಸಾಕ್ಷರತೆಯು 61.66 ರಷ್ಟು ಇರುವುದು ಕಂಡುಬರುತ್ತದೆ.

ಇಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಕಡಿಮೆಯಿದ್ದು ಮಹಿಳೆಯರು ಸಾಕ್ಷರತೆಯಲ್ಲಿ ದೇಶ, ರಾಜ್ಯ, ಜಿಲ್ಲಾ, ಹಾಗೂ ತಾಲೂಕುಗಳಲ್ಲಿ ಹಿಂದಿಳಿದಿರುವುದು ತಿಳಿದುಬರುತ್ತದೆ. ಇದು ಬಳ್ಳಾರಿ ಜಿಲ್ಲೆಯ ಸಾಕ್ಷರತೆಯಲ್ಲಿ 4ನೇ ಸ್ಥಾನವನ್ನು ಹೊಂದಿರುವುದಾಗಿದೆ. ಕಂಡುಬರುತ್ತದೆ. ಹಗರಿಬೊಮ್ಮನಹಳ್ಳಿ ತಾಲೂಕು ಸಾಕ್ಷರತೆಯಲ್ಲಿ 5ನೇ ಸ್ಥಾನವನ್ನು ಪಡೆದುಕೊಂಡಿದ್ದು, ಇದು ಒಟ್ಟು ಸಾಕ್ಷರತಾ ಪ್ರಮಾಣವು 69.4 ರಷ್ಟು ಹೊಂದಿದ್ದು ಪುರುಷರ ಸಾಕ್ಷರತೆ ಪ್ರಮಾಣ 79.05 ರಷ್ಟು ಮಹಿಳೆಯರ ಸಾಕ್ಷರತೆಯು 59.56 ರಷ್ಟಿರುವುದು ಕಾಣುತ್ತವೆ. ಗ್ರಾಮಿಣ ಪ್ರದೇಶದ ಸಾಕ್ಷರತೆಯು 67.24, ಅಗಿದ್ದು ನಗರ ಪ್ರದೇಶದ ಸಾಕ್ಷರತೆಯು 78.06 ರಷ್ಟು ಅಗಿರುತ್ತದೆ. ಇಲ್ಲಿ ಗ್ರಾಮೀಣ ಪ್ರದೇಶದ ಸಾಕ್ಷರತೆಗಿಂತಲೂ ನಗರ ಪ್ರದೇಶದ ಸಾಕ್ಷರತೆಯು ಹೆಚ್ಚಾಗಿರವುದು ಸ್ಪಷ್ಟವಾಗಿದೆ. ಕೂಡ್ಲಿಗಿ ತಾಲೂಕಿನ ಸಾಕ್ಷರತೆಯು 67.33 ಹೊಂದಿದ್ದು, ಜಿಲ್ಲೆಯಲ್ಲಿ 7ನೇ ಸ್ಥಾನವನ್ನು ಪಡೆದಿದೆ. ಗ್ರಾಮೀಣ ಸಾಕ್ಷರತೆ 65.93 ಅಗಿದ್ದು, ನಗರ ಸಾಕ್ಷರತೆಯು 77.54 ರಷ್ಟು ಇರುವುದು ತಿಳಿದುಬಂದಿದೆ. ನಗರ ಪ್ರದೇಶದ ಸಾಕ್ಷರತೆ ಪ್ರಮಾಣವು ಹೆಚ್ಚಿನ ಪ್ರಮಾಣದಲ್ಲಿರುವುದು ಗುರುತಿಸಲಾಗಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಪುರಷರ ಸಾಕ್ಷರತೆಯು ಹೆಚ್ಚಾಗಿದ್ದು ಮಹಿಳೆಯರ ಪ್ರಮಾಣ ಕಡಿಮೆ ಇದೆ. ಅದರೆ ಗ್ರಾಮೀಣ ಪ್ರದೇಶದ ಸಾಕ್ಷರತೆಗಿಂತಲೂ ನಗರ ಪ್ರದೇಶದ ಸಾಕ್ಷರತೆಯು ಹೆಚ್ಚಿನ ಪ್ರಮಾಣದಲ್ಲಿರುವುದು ಈ ಮೇಲಿನ ಕೋಷ್ಟಕದಿಂದ ಅರಿಯಬಹುದಾಗಿದೆ.

**ಉಪಸಂಹಾರ**

ಬಳ್ಳಾರಿ ಜಿಲ್ಲೆಯು ನೈಸರ್ಗಿಕ ಸಂಪನ್ಮೂಲಗಳ ತವರೂರಾಗಿದ್ದು, ಹೆಚ್ಚಾಗಿ ಗಣಿ ಮತ್ತು ಕೃಷಿಯನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಒಣಭೂಮಿ ಕೃಷಿಯು 3/1 ರಷ್ಟುದ್ದು ನೀರಾವರಿ ಸೌಲಭ್ಯವನ್ನು ಪಡೆಯುವಲ್ಲಿ ವಂಚಿತವಾಗಿರುವುದು ಕಂಡುಬರುತ್ತದೆ. ಸಮಾಜಿಕವಾಗಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಸಾಗುತ್ತಿದೆ.

**ಉಲ್ಲೇಖಗಳು**


1. ಆಲ್ದೋಳ್ಳಿ ವಿಜಯ ಅಂಗಡಿ ಟಿ. ಬಿ ಒಣಪ್ರದೇಶದಲ್ಲಿ ತೋಟಗಾರಿಕೆ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು 2018 ಪು ಸಂ – 11
2. ಬಳ್ಳಾರಿ ಜಿಲ್ಲಾ ಗೆಜೆಟೆರಿಯರ್
3. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳು ನೋಟ 2020–21
4. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳು ನೋಟ 2016–17
5. ಕರ್ನಾಟಕದ ಅಂಕಿ ಅಂಶಗಳು ನೋಟ 2020–21
6. ಮಾನವ ಅಭಿವೃದ್ಧಿ ಸೂಚ್ಯಂಕ 2015



**Creative Commons (CC) License**

This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.